ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.
*E-mail:Commissioner.pue@gmail.com. * Ph. No.23361857, 23361858* Fax-23361852*

ಸಂಖ್ಯೆ:ಪಿಯು/12/ಸಿಬ್ಬಂದಿ/ಸಿಆರ್-2/ಎನ್ಓಸಿ/2016-17 ದಿನಾಂಕ: 16-01-2017.

## ಜ್ಞಾಪನ

**ವಿಷಯ:**- ಉಪನೊಂದಣಾಧಿಕಾರಿ ಹುದ್ದೆಗೆ / ಇತರೆ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:**-ಜಿಲ್ಲಾ ಉಪನಿರ್ದೇಶಕರು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರ ಪತ್ರಗಳು.

-*-

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು, ಇವರು ಜಿಲ್ಲಾ ಉಪನಿರ್ದೇಶಕರ /ಪ್ರಾಂಶುಪಾಲರುಗಳ ಮುಖೇನ ಉಲ್ಲೇಖಿತ ಪತ್ರಗಳಲ್ಲಿ ಉಪನೊಂದಣಾಧಿಕಾರಿ ಹುದ್ದೆಗೆ / ಇತರೆ ಪರೀಕ್ಷೆಗಳಿಗೆ ಅನುಮತಿ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಉಪನ್ಯಾಸಕರುಗಳ/ಸಿಬ್ಬಂದಿಗಳ ಹೆಸರಿನ ಮುಂದೆ ತೋರಿಸಿರುವ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಷರತ್ತಿಗೊಳಪಟ್ಟು ಅನುಮತಿ ನೀಡಿದೆ:

| ಕ್ರ.ಸ | ಹೆಸರು ಮತ್ತು ಕಾಲೇಜು ವಿಳಾಸ<br>ಶ್ರೀಮತಿ/ಶ್ರೀ | ಅನುಮತಿ ಕೋರಲಾದ ಹುದ್ದೆ |
|---|---|---|
| 1 | **ಯಶೋದಮ್ಮ ಕೆ ಒ,**<br>ಭೌತಶಾಸ್ತ್ರ ಉಪನ್ಯಾಸಕರು,<br>ಶೆ.ಸಿ. ಸರ್ಕಾರಿ ಪದವಿ ಪೂರ್ವ ಕಾಲೇಜು.<br>ಅಜ್ಜಂಪುರ, ತರೀಕೆರೆ ತಾ॥,<br>ಚಿಕ್ಕಮಗಳೂರು ಜಿಲ್ಲೆ. | ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದು ವಿಜ್ಞಾನ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಲು |
| 2 | **ರಾಮಸಿಂಗ ಬಾಬು ಚವ್ಹಾಣ,**<br>ಗಣಿತ ಉಪನ್ಯಾಸಕರು.<br>ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು. ಮೊರಬ. ನವಲಗುಂದ ತಾ॥.<br>ಧಾರವಾಡ ಜಿಲ್ಲೆ. | ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು ಇವರು ಆಹ್ವಾನಿಸಿರುವ ರಾಜ್ಯ ಸಿವಿಲ್ ಸೇವೆಯಡಿಯಲ್ಲಿ ಪ್ರಥಮ ದರ್ಜೆ ಸಹಾಯಕರ. ಹುದ್ದೆಗೆ ಹಾಗು ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು ಇವರು ಕರೆದಿರುವ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿನ ಉಪನೊಂದಣಾಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸಲು |
| 3 | **ಬಸವರಾಜ ಬಿದರೂರ,**<br>ಗಣಿತ ಉಪನ್ಯಾಸಕರು.<br>ಸರ್ಕಾರಿ ಪದವಿ ಪೂರ್ವ ಕಾಲೇಜು.<br>ಕುಣಿಮೆಳ್ಳಿಹಳ್ಳಿ. ಸವಣೂರು ತಾ॥.<br>ಹಾವೇರಿ ಜಿಲ್ಲೆ. | ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ವಿವಿದ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದು ವಿಜ್ಞಾನ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಲು |
| 4 | **ಅಂಜನ್ ವಿ ವಿ,**<br>ಗಣಿತ ಉಪನ್ಯಾಸಕರು.<br>ಸರ್ಕಾರಿ ಪದವಿ ಪೂರ್ವ ಕಾಲೇಜು.<br>ಬನ್ನಿಕುಪ್ಪೆ. ಹುಣಸೂರು ತಾ॥.<br>ಮೈಸೂರು ಜಿಲ್ಲೆ. | ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ವಿವಿದ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದು ವಿಜ್ಞಾನ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಲು |
| 5 | **ಪ್ರವೀಣ ಜಿ.**<br>ವಾಣಿಜ್ಯಶಾಸ್ತ್ರ ಉಪನ್ಯಾಸಕರು.<br>ಸರ್ಕಾರಿ ಪದವಿ ಪೂರ್ವ ಕಾಲೇಜು. ಆರಗ.<br>ತೀರ್ಥಹಳ್ಳಿ. ಶಿವಮೊಗ್ಗ ಜಿಲ್ಲೆ. | ಪ್ರಸ್ತುತ ರೈಲ್ವೆ ಇಲಾಖೆಯು ನಡೆಸುತ್ತಿರುವ ವಿವಿಧ 'ಸಿ' ವೃಂದದ ನೇಮಕಾತಿಯ ದ್ವಿತೀಯ ಹಂತದ ಹುದ್ದೆಗೆ ಅರ್ಜಿ ಸಲ್ಲಿಸಲು |

**ಷರತ್ತುಗಳು:**

1. ಸದರಿ ಉಪನ್ಯಾಸಕರು/ದ್ವಿದಸ/ಪ್ರದಸ, ಪರೀಕ್ಷೆಗೆ ಸಂಬಂಧಿಸಿದಂತೆ ಅಧ್ಯಯನವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕೈಗೊಳ್ಳತಕ್ಕದ್ದು. ಉಪನ್ಯಾಸಕರುಗಳು, ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ಸರ್ಕಾರ/ಇಲಾಖೆಗೆ ಯಾವುದೇ ಆರ್ಥಿಕ ಹೊರೆ ಉಂಟಾಗತಕ್ಕದ್ದಲ್ಲ.
2. ಸದರಿ ಉಪನ್ಯಾಸಕರುಗಳು, ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೊಂದರೆ ಉಂಟಾಗದಂತೆ ಬಿಡುವಿನ ವೇಳೆಯಲ್ಲಿ, ಪರೀಕ್ಷೆಯ ಅಧ್ಯಯನಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳತಕ್ಕದ್ದು.
3. ಸದರಿ ಉಪನ್ಯಾಸಕರು/ದ್ವಿದಸ/ಪ್ರದಸ, ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ವರ್ಗಾವಣೆ ಕೋರುವಂತಿಲ್ಲ ಅಥವಾ ಅವರ ಪರೀಕ್ಷೆಯ ಅಧ್ಯಯನ ಸರ್ಕಾರದ/ಇಲಾಖೆಯ ವರ್ಗಾವಣೆಗೆ ಅಡ್ಡಿ ಬರುವಂತಿಲ್ಲ.
4. ಸದರಿ ಉಪನ್ಯಾಸಕರು/ದ್ವಿದಸ/ಪ್ರದಸ, ಬೇರೆ ಯಾವುದೇ ಇಲಾಖೆಯ ಹುದ್ದೆಗೆ ಆಯ್ಕೆಯಾದಲ್ಲಿ, ಈಗ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಯಿಂದ ಬಿಡುಗಡೆ ಹೊಂದುವ ಮೊದಲು ಇಲಾಖೆಯ ಅನುಮತಿ ಪಡೆಯತಕ್ಕದ್ದು.

ಜಂಟಿ ನಿರ್ದೇಶಕರು(ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರಿಗೆ.
2. ಸಹಾಯಕ ನಿರ್ದೇಶಕರು, ಇ-ಆಡಳಿತ, ಪಪೂಶಿಇ, ಬೆಂಗಳೂರು.
3. ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ಹಾಗೂ ಉಪನ್ಯಾಸಕರು/ಸಿಬ್ಬಂದಿ ರವರಿಗೆ ಪ್ರಾಂಶುಪಾಲರ ಮುಖೇನ.
4. ಕಛೇರಿ ಪ್ರತಿ.